# ಕರ್ನಾಟಕ ಸರ್ಕಾರದ ನಡಾವಳಿಗಳು

ವಿಷಯ : M/s Kleio Solar Power Private Limited ಇವರಿಗೆ ಕೊಪ್ಪಳ ಜಿಲ್ಲೆ, ಕೊಪ್ಪಳ ಮತ್ತು ಕುಕ್ಕನೂರು ತಾಲ್ಲೂಕುಗಳ ವಿವಿಧ ಗ್ರಾಮಗಳಲ್ಲಿ 182 ಮೆ.ವ್ಯಾ. ಸಾಮರ್ಥ್ಯದ ಪವನ ಮತ್ತು ಸೌರ ಮಿಶ್ರಿತ ಹೈಬ್ರಿಡ್ ವಿದ್ಯುತ್ ಯೋಜನೆಯನ್ನು ಹಂಚಿಕೆ ಮಾಡುವ ಕುರಿತು.

**ಓದಲಾಗಿದೆ :**
1) ಸರ್ಕಾರಿ ಆದೇಶ ಸಂಖ್ಯೆ:ಎನರ್ಜಿ 323 ಎನ್‌ಸಿಇ 2022, ದಿನಾಂಕ: 18.10.2022
2) ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತ ಇವರ ಪತ್ರ ಸಂಖ್ಯೆ:KREDL/08/ KSPPL (77 W + 105 S)/Koppal/F-59/2022/0211, ದಿನಾಂಕ: 19.01.2023.
3) ಕರ್ನಾಟಕ ನವೀಕರಿಸಬಹುದಾದ ಇಂಧನ ನೀತಿ 2022-27
4) ಮಾನ್ಯ ಉಚ್ಚ ನ್ಯಾಯಾಲಯದ ರಿಟ್ ಅರ್ಜಿ ಸಂಖ್ಯೆ:15113/2022 (GM-RES)

ಸಂ. 558
ದಿನಾಂಕ 9/2/23

**ಪ್ರಸ್ತಾವನೆ :-**

ಮೇಲೆ ಓದಲಾದ (1)ರ ಸರ್ಕಾರಿ ಆದೇಶದಲ್ಲಿ M/s Kleio Solar Power Private Limited ಕಂಪನಿಯವರಿಗೆ ಕೊಪ್ಪಳ ಜಿಲ್ಲೆಯ, ಕೊಪ್ಪಳ ಮತ್ತು ಕುಕ್ಕನೂರು ತಾಲ್ಲೂಕುಗಳ, ಗಟ್ಟರೆಡ್ಡಿಹಾಲ, ಅಲವಂಡಿ, ಮಾರಮ್ಮನಹಳ್ಳಿ, ಬೆಟಗೇರಿ, ಕವಲೂರ, ತಲಕಲ್ಲ, ಕೋಮಲಾಪುರ್, ಹನವಾಲ, ಹಿರೇಶಿಂಧೋಗಿ, ಮೈನಾಹಳ್ಳಿ, ಬೀಕನಹಳ್ಳಿ ಮತ್ತು ದೊಂಬ್ರಹಳ್ಳಿ ಗ್ರಾಮಗಳಲ್ಲಿ 77 ಮೆ.ವ್ಯಾ. ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯನ್ನು ಹಂಚಿಕೆ ಮಾಡಲಾಗಿದೆ.

ಮೇಲೆ ಓದಲಾದ (2)ರ ಪತ್ರದಲ್ಲಿ ವ್ಯವಸ್ಥಾಪಕ ನಿರ್ದೇಶಕರು, ಕೆ.ಆರ್.ಇ.ಡಿ.ಎಲ್. ಇವರು M/s Kleio Solar Power Private Limited ಕಂಪನಿಯು ಕೊಪ್ಪಳ ಜಿಲ್ಲೆಯ, ಕೊಪ್ಪಳ ಮತ್ತು ಕುಕ್ಕನೂರು ತಾಲ್ಲೂಕುಗಳ ವಿವಿಧ ಗ್ರಾಮಗಳಲ್ಲಿ ಹಂಚಿಕೆಯಾಗಿರುವ 77 ಮೆ.ವ್ಯಾ. ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯ ಜೊತೆಗೆ 105 ಮೆ.ವ್ಯಾ. ಸಾಮರ್ಥ್ಯದ ಸೌರ ವಿದ್ಯುತ್ ಸಾಮರ್ಥ್ಯವನ್ನು ಸೇರಿಸಿ ಕೊಪ್ಪಳ ಜಿಲ್ಲೆಯ, ಕೊಪ್ಪಳ ತಾಲ್ಲೂಕಿನ ಅಲವಂಡಿ ಗ್ರಾಮದಲ್ಲಿ ಒಟ್ಟು 182 ಮೆ.ವ್ಯಾ. ಸಾಮರ್ಥ್ಯದ ಪವನ ಮತ್ತು ಸೌರ ಮಿಶ್ರಿತ ಹೈಬ್ರಿಡ್ ಯೋಜನೆಯನ್ನು ಸ್ಥಾಪಿಸಿ, ಸದರಿ ಯೋಜನೆಯಿಂದ ಉತ್ಪಾದನೆಯಾಗುವ ವಿದ್ಯುತ್ತನ್ನು ಕೇಂದ್ರ ಸರ್ಕಾರದ Power Grid Corporation of India Limited (PGCIL) ವಿದ್ಯುತ್ ಪ್ರಸರಣ ಜಾಲಕ್ಕೆ ಜೋಡಿಸಿ, ಹೊರ ರಾಜ್ಯಗಳಿಗೆ SECI ಬಿಡ್ಡಿಂಗ್/ಮೂರನೇ ವ್ಯಕ್ತಿಗೆ Inter State Transmission System (ISTS) ಮುಖಾಂತರ ವಿದ್ಯುತ್ ಸರಬರಾಜು ಮಾಡಲು ಅನುಮತಿ ನೀಡುವಂತೆ ಕೋರಿರುವ ಪ್ರಸ್ತಾವನೆಯನ್ನು ಪರಿಶೀಲಿಸಿ, M/s Kleio Solar Power Private Limited ಕಂಪನಿಯವರು ಹೊಸ ಇಂಧನ ನೀತಿ 2022-27ರಂತೆ 105 MW ac ಸಾಮರ್ಥ್ಯದ ಯೋಜನೆಗೆ ಅರ್ಜಿ ಶುಲ್ಕ ಹಾಗೂ ಸಂಸ್ಕರಣಾ ಶುಲ್ಕವನ್ನು ಕೆ.ಆರ್.ಇ.ಡಿ.ಎಲ್. ನಿಯಮಿತಕ್ಕೆ ಸಂದಾಯ ಮಾಡಿರುತ್ತಾರೆ. ಸದರಿ 182 ಮೆ.ವ್ಯಾ. (77 ಮೆ.ವ್ಯಾ. ಪವನ + 105 ಮೆ.ವ್ಯಾ. ಸೌರ) ಸ್ಥಾಪಿತ ಸಾಮರ್ಥ್ಯ (150 ಮೆ.ವ್ಯಾ. Evacuation ಸಾಮರ್ಥ್ಯ) ಸಾಮರ್ಥ್ಯದ ಪವನ ಮತ್ತು ಸೌರ ಮಿಶ್ರಿತ ಹೈಬ್ರಿಡ್ ಯೋಜನೆಗೆ ಅಭಿವೃದ್ಧಿದಾರರು 77 ಮೆ.ವ್ಯಾ. ಸಾಮರ್ಥ್ಯಕ್ಕೆ 2.2 ಮೆ.ವ್ಯಾ. ಸಾಮರ್ಥ್ಯದ 35 ವಿಂಡ್ ಟರ್ಬೈನ್‌ಗಳನ್ನು ಅಳವಡಿಸುತ್ತಿದ್ದು, ಪ್ರತಿ ವಿಂಡ್ ಟರ್ಬೈನ್‌ಗೆ 04 ಎಕರೆಯಂತೆ ಲೆಕ್ಕೀಕರಿಸಿ ಒಟ್ಟು 140 ಎಕರೆ (35 Nos of WTG X 4 Acre = 140 Acres) ಜಮೀನನ್ನು ಟೋಪೋಶೀಟ್ 57 A/3, 57 A/4 & 48 M/16 ರಲ್ಲಿ ಉಪಯೋಗಿಸಿಕೊಳ್ಳಬಹುದಾಗಿದೆ ಹಾಗೂ 105 MW ac ಸಾಮರ್ಥ್ಯದ ಸೌರ ಘಟಕವನ್ನು ಸ್ಥಾಪಿಸಲು ಪ್ರತಿ MW ac ಸಾಮರ್ಥ್ಯಕ್ಕೆ 3.5 ಎಕರೆಯಂತೆ 368 ಎಕರೆ (105 MWac X 3.5 Acre = 368 Acres) ಜಮೀನು ಸೇರಿ ಒಟ್ಟು 508 ಎಕರೆ (140 Acre + 368 Acre = 508 Acres) ಜಮೀನನ್ನು ಮಾತ್ರ ಹೈಬ್ರಿಡ್ ಯೋಜನೆಗೆ ಉಪಯೋಗಿಸಿಕೊಳ್ಳಬಹುದಾಗಿದೆ.

MD KREDL
AGM (W) 14/2

....2

GM (Tech) KREDL

APA 18/2/23

Wind Section
Inward No. 1634
Date 15/2/23
Sig

M/s Kleio Solar Power Private Limited ಕಂಪನಿಯು ದಿನಾಂಕ:13.08.2020ರಂದು ನೊಂದಾವಣೆಗೊಂಡಿದ್ದು, ಇದರ ನೊಂದಾಯಿತ ಕಚೇರಿಯು ತೆಲಂಗಾಣದ ಹೈದರಾಬಾದ್‌ನಲ್ಲಿ ಸ್ಥಾಪಿತಗೊಂಡಿದೆ. ಸದರಿ ಕಂಪನಿಯು M/s Vibrant Energy Holdings Pte Limited ಇವರಿಂದ ಸ್ಥಾಪಿತಗೊಂಡ SPV ಸಂಸ್ಥೆಯಾಗಿರುತ್ತದೆ. M/s Vibrant Energy Holdings Pte Limited ಇವರ ನೆಟ್‌ವರ್ತ್ ದಿನಾಂಕ:31.03.2022ರ ಅಂತ್ಯಕ್ಕೆ ರೂ.641 ಕೋಟಿಗಳಾಗಿರುತ್ತದೆ ಎಂದು ಚಾರ್ಟೆಡ್ ಅಕೌಂಟೆಂಟ್ ಇವರು ದೃಢೀಕರಣ ಪತ್ರವನ್ನು ನೀಡಿರುವುದಾಗಿ ಮತ್ತು ಅಭಿವೃದ್ಧಿದಾರರು ಸದರಿ ಯೋಜನೆಯನ್ನು ಈಗಾಗಲೇ ಪವನ ವಿದ್ಯುತ್ ಯೋಜನೆಯ ಹಂಚಿಕೆ ಆದೇಶದ ಪ್ರಕಾರ ದಿನಾಂಕ:17.10.2024ರೊಳಗೆ ಅನುಷ್ಠಾನಗೊಳಿಸತಕ್ಕದ್ದು ಮತ್ತು ಹಂಚಿಕೆ ಆದೇಶ ನೀಡಿದ ದಿನಾಂಕದಿಂದ 45 ದಿನಗಳೊಳಗೆ ಪ್ರತಿ ಮೆ.ವ್ಯಾ.ಗೆ ರೂ.5 ಲಕ್ಷದಂತೆ ನೆರವೇರಿಕೆ ಬ್ಯಾಂಕ್ ಖಾತರಿ ನೀಡಿ ಕೆ.ಆರ್.ಇ.ಡಿ.ಎಲ್. ನಿಯಮಿತದೊಂದಿಗೆ ಒಡಂಬಡಿಕೆ ಮಾಡಬೇಕಾಗಿರುತ್ತದೆ. ಕೆ.ಆರ್.ಇ.ಡಿ.ಎಲ್. ನಿಯಮಿತವು ತಿಳಿಸಿರುತ್ತದೆ.

ಮೇಲೆ ಓದಲಾದ ಕ್ರ.ಸಂ.(3)ರ ಕರ್ನಾಟಕ ನವೀಕರಿಸಬಹುದಾದ ಇಂಧನ ನೀತಿ 2022-27 ರ Clause 4.5 ರಲ್ಲಿ ಚಾಲ್ತಿಯಲ್ಲಿರುವ ಯೋಜನೆಗಳನ್ನು Solar-Wind Hybridization ಮಾಡಲು ಅವಕಾಶ ಕಲ್ಪಿಸಲಾಗಿದೆ.

ಕೇಂದ್ರ ಸರ್ಕಾರದ ನವ ಮತ್ತು ನವೀಕರಿಸಬಹುದಾದ ಇಂಧನ ಮಂತ್ರಾಲಯದ ಕಚೇರಿ ಆದೇಶ ಸಂಖ್ಯೆ:283/54/2018-Grid Solar Part (2), ದಿನಾಂಕ:13.01.2022ರ ಪ್ರಕಾರ ಸ್ವಯಂ ಬಳಕೆ/ಮೂರನೇ ವ್ಯಕ್ತಿ ಮಾರಾಟ, ಸಮೂಹ ಸ್ವಂತ ಮತ್ತು ಖಾಸಗಿ ಪಾರ್ಕ್ ಹಾಗೂ ನವೀಕರಿಸಬಹುದಾದ ಇಂಧನ ಬಾಧ್ಯತೆ ವರ್ಗಗಳಡಿ ಹಂಚಿಕೆ ಪಡೆದ ಅಭಿವೃದ್ಧಿದಾರರು MNRE ಇಂದ ಅನುಮೋದಿತ Solar Photovoltaic Modules ಉಪಯೋಗಿಸುವ ಷರತ್ತು ವಿಧಿಸುವಂತೆ ಸಹ ಕೋರಿರುತ್ತಾರೆ.

ಮೇಲೆ ಓದಲಾದ ಕ್ರಮ ಸಂಖ್ಯೆ (4) ರ ರಿಟ್ ಅರ್ಜಿಯಲ್ಲಿ ಕರ್ನಾಟಕ ನವೀಕರಿಸಬಹುದಾದ ಇಂಧನ ನೀತಿ 2022-27 ನೀತಿಯನ್ನು ಪ್ರಶ್ನಿಸಿ M/s Solar Power Developers Association ಇವರು ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ಪ್ರಕರಣವನ್ನು ದಾಖಲಿಸಿದ್ದು, ಮಾನ್ಯ ನ್ಯಾಯಾಲಯವು ದಿನಾಂಕ:17.08.2022 ರ ಮಧ್ಯಂತರ ಆದೇಶದಲ್ಲಿ ಸದರಿ ನೀತಿಗೆ ತಡೆಯಾಜ್ಞೆ ನೀಡಿರುತ್ತದೆ. ಸದರಿ ಪ್ರಕರಣದಲ್ಲಿ ಮಾನ್ಯ ನ್ಯಾಯಾಲಯವು ನೀಡುವ ಅಂತಿಮ ಆದೇಶಕ್ಕೊಳಪಟ್ಟು, ಈ ಪ್ರಸ್ತಾವನೆಯನ್ನು ಪರಿಶೀಲಿಸಿ, ಸರ್ಕಾರವು ಕೆಳಕಂಡಂತೆ ಆದೇಶಿಸಿದೆ.

**<u>ಸರ್ಕಾರಿ ಆದೇಶ ಸಂಖ್ಯೆ: ಎನರ್ಜಿ 59 ಎನ್‌ಸಿಇ 2023</u>**
**<u>ಬೆಂಗಳೂರು, ದಿನಾಂಕ :03/02/2023</u>**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನಲೆಯಲ್ಲಿ, M/s Kleio Solar Power Private Limited ಇವರಿಗೆ ಕೊಪ್ಪಳ ಜಿಲ್ಲೆ, ಕೊಪ್ಪಳ ಮತ್ತು ಕುಕ್ಕನೂರು ತಾಲ್ಲೂಕುಗಳ ವಿವಿಧ ಗ್ರಾಮಗಳಲ್ಲಿ 182 ಮೆ.ವ್ಯಾ. (77 ಮೆ.ವ್ಯಾ ಪವನ + 105 ಮೆ.ವ್ಯಾ ಸೌರ) ಸ್ಥಾಪಿತ ಸಾಮರ್ಥ್ಯ (150 ಮೆ.ವ್ಯಾ. Evacuation ಸಾಮರ್ಥ್ಯ) ಪವನ ಮತ್ತು ಸೌರ ಮಿಶ್ರಿತ ಹೈಬ್ರಿಡ್ ಯೋಜನೆಯನ್ನುಈ ಕೆಳಕಂಡ ಷರತ್ತು ಹಾಗೂ ಶೆಡ್ಯೂಲ್‌ನಲ್ಲಿರುವಂತೆ ಹಂಚಿಕೆ ಮಾಡಿ ಆದೇಶಿಸಿದೆ.

**Tentative Latitude and Longitude of WTG Locations for 77 MW (35 Nos of WTG's x 2.2 MW) capacity Wind Power Project of M/s Kleio Solar Power Private Limited**

| Sl. No | WTG No. | Latitude | Longitude | Survey No. | Village | Taluk | District |
|---|---|---|---|---|---|---|---|
| 1 | VEHKP-01 | 15°15'2.11" | 75°56'8.13" | 19 | Gattareddyhala | Koppal | Koppal |

....3